ಸರ್ಟಿಫಿಕೇಟ್ ಶಿಕ್ಷಣ ಪರೀಕ್ಷೆ , ಆಗಸ್ಟ್ 2009
ಪತ್ರಿಕೆ – 1 : ಪಠ್ಯಗಳು ಮತ್ತು ವಾಕ್ಯರಚನೆ

Certificate Course in Kannada for Non Kannada Speakers
Examination, August 2009
Paper – I : TEXTS AND COMPOSITION

ಕಾಲ : 3 ಗಂಟೆಗಳು | ಗರಿಷ್ಠಾಂಕ : 100
Time : 3 Hours | Max. Marks : 100

PART – A (Text)
ಭಾಗ - ಎ (ಪಠ್ಯಗಳು)

1. ಯಾವುದಾದರೂ **ಆರು** ಪ್ರಶ್ನೆಗಳಿಗೆ ಸಂಕ್ಷೇಪವಾಗಿ ಉತ್ತರಿಸಿ : **(6×5=30)**

1.1) ತೋಳಕ್ಕೆ ಹೊಳೆದ ಉಪಾಯವೇನು ?

1.2) 'ಬಲಿಷ್ಠರ ನ್ಯಾಯ ' ಕಥೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.

1.3) ಕಪ್ಪೆಗಳಿಗೆ ಕತ್ತೆಯನ್ನು ನೋಡಿ ಏಕೆ ಆಶ್ಚರ್ಯವಾಯಿತು ?

1.4) ಸೆರೆಸಿಕ್ಕಿದ ಕೋಗಿಲೆ ತಪ್ಪಿಸಿಕೊಳ್ಳಲು ಮಾಡಿದ ಉಪಾಯವೇನು ?

1.5) ಲೋಭಿ ನರಿಯನ್ನು ಕತೆಯಲ್ಲಿ 'ಲೋಭಿ' ಎಂದು ಕರೆಯಲು ಕಾರಣವೇನು ?

1.6) ಅಕ್ಬರನ ಆಸ್ಥಾನಕ್ಕೆ ಬಂದವರು ಯಾರು ? ಅವರು ಹಾಕಿದ ಸವಾಲು ಏನು ?

1.7) ಪಂಡಿತನ ಮಾತೃಭಾಷೆ ಹಿಂದಿ ಎಂದು ಬೀರ್‌ಬಲ್ ಹೇಗೆ ಕಂಡುಹಿಡಿದ ?

1.8) 'ಗುರು ಶಿಷ್ಯರ ' ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

1.9) ರಂಗಪ್ಪನ ಮೂರು ಮಕ್ಕಳಲ್ಲಿ ಬುದ್ಧಿವಂತರು ಯಾರು ? ಏಕೆ ?

1.10) ಬೆಸ್ತನ ಹೆಂಡತಿಗೆ ಮೀನು ಹೇಗೆ ಬುದ್ಧಿ ಕಲಿಸಿತು ?

2. ಅ) ಇವುಗಳಲ್ಲಿ **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ : **(4×3=12)**

2.1) ಕೈ ತಪ್ಪಿದ್ದಕ್ಕೆ ಒದ್ದಾಡಬೇಡ

2.2) ಇದು ಕಷ್ಟಪಟ್ಟರೆ ಪ್ರತಿ ವರ್ಷ ಸಿಗುವ ನಿಧಿ

2.3) ನಿನ್ನ ಹೆಂಡತಿಯ ಆಸೆಗೆ ಮಿತಿಯೇ ಇಲ್ಲ

2.4) ಎಲೋ ರಾಮ, ಇದೇನು ವೇಷವೊ ?

2.5) ನಿನ್ನೆ ರಾತ್ರಿ ಗಜಶಾಲೆಯಲ್ಲಿ ಹಾಡಿದವರು ಯಾರು ? ನೋಡಿ ಬಾ.

2.6) ಏನು ತಮಾಷೆ ! ಕುದುರೆ ಗಂಟೆ ಬಾರಿಸಿತಲ್ಲ !

P.T.O.

ಆ) ಸೂಚನೆಗೆ ಅನುಗುಣವಾಗಿ ಉತ್ತರಿಸಿ : **(½ ×4×4=8)**

2.7) ವಿರುದ್ಧಪದಗಳನ್ನು ಬರೆಯಿರಿ :
ಕಪ್ಪು, ಕತ್ತಲೆ, ಜಾಣ, ಉದ್ದ

2.8) ಅನ್ಯವಚನ ಬರೆಯಿರಿ :
ಮಗು, ಕೋತಿ, ನಾಯಿಗಳು, ತಂಗಿ

2.9) ಅನ್ಯ ಲಿಂಗಗಳನ್ನು ಬರೆಯಿರಿ :
ಮುದುಕ, ತಂಗಿ, ರಾಜ, ತಂದೆ

2.10) ಅಕ್ಷರಗಳಲ್ಲಿ ಬರೆಯಿರಿ :

$149,\ 4\frac{3}{4},\ 5\frac{1}{2},\ 111$

3. ಇವುಗಳಲ್ಲಿ ಯಾವುದಾದರೂ **ಐದನ್ನು** ನಿಮ್ಮ ವಾಕ್ಯಗಳಲ್ಲಿ ಬಳಸಿ : **(5×2=10)**

1) ಸರ್ಕಸ್ಸು 2) ಬೆಸ್ತ 3) ಮಡಿಕೆ 4) ಭಾರತ
5) ಸಿನಿಮಾ 6) ಚಕ್ರ 7) ಚಂದ್ರ 8) ನಮಸ್ಕಾರ

PART - B **(Composition)**
ಭಾಗ - ಬಿ (ವಾಕ್ಯ ರಚನೆ)

4. ಈ ಕೆಳಗಿನ ರೂಪರೇಖೆಯನ್ನು ವಿಸ್ತರಿಸಿ **ಒಂದು** ಕಥೆ ಬರೆಯಿರಿ : **10**

ಜಗಳಾಡುವ ಮಕ್ಕಳು – ಅಪ್ಪನಿಗೆ ಚಿಂತೆ – ಮಕ್ಕಳಿಗೆ ಉಪಾಯ – ಒಬ್ಬೊಬ್ಬರಿಗೆ ಒಂದೊಂದು ಕಟ್ಟಿಗೆ – ಕಟ್ಟಿಗೆ ಮುರಿಯಿತು – ಎಲ್ಲ ಕಟ್ಟಿಗೆ ಸೇರಿಸು – ಮುರಿಯಲು ಹೇಳಿದ – ಮಕ್ಕಳಿಗೆ ಆಗದೇ ಹೋಯಿತು – ಅಪ್ಪ ಮಕ್ಕಳಿಗೆ ಬುದ್ಧಿ ಹೇಳು – ಜೊತೆಯಿದ್ದರೆ ಶಕ್ತಿಶಾಲಿ – ಬೇರೆಯವರು ಏನೂ ಮಾಡಲು ಆಗಲ್ಲ.

ಅಥವಾ

ನಿಮಗಿಟ್ಟಿರುವ ಪಠ್ಯದ ಯಾವುದಾದರೂ ಒಂದು ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

5. ನಿಮ್ಮ ತಂದೆಗೆ ಪಿಕ್‌ನಿಕ್ ಹೋಗಲು ಹಣ ಕೇಳಿ ಪತ್ರ ಬರೆಯಿರಿ. **10**

ಅಥವಾ

ಮದುವೆಯಾಗಿರುವ ನಿಮ್ಮ ಅಕ್ಕನ ಯೋಗಕ್ಷೇಮ ವಿಚಾರಿಸಿ ಪತ್ರ ಬರೆಯಿರಿ.

6. ಇವುಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು **ಒಂದು** ಪುಟ ಮೀರದಂತೆ ಪ್ರಬಂಧ ಬರೆಯಿರಿ. **10**

1) ಸ್ತ್ರೀಯ ಸಮಸ್ಯೆಗಳು.
2) ಇಂಗ್ಲಿಷ್ ಬೇಕೆ ? ಬೇಡವೆ ? ಕಾರಣ ಕೊಡಿ.
3) ವಿಜ್ಞಾನದಿಂದ ಆಗುವ ಉಪಯೋಗಗಳು.
4) ನಾನು ಬಯಸುವ ಮನರಂಜನೆ.

ಅಥವಾ

ಇವುಗಳಲ್ಲಿ ಯಾವುದಾದರೂ **ಒಂದು** ಗಾದೆಯ ಅರ್ಥವನ್ನು ವಿವರಿಸಿ :

1) ಹೊಳೆದದ್ದೆಲ್ಲ ಚಿನ್ನವಲ್ಲ
2) ಅತಿ ಆಸೆ ಗತಿಗೇಡು
3) ದಡ್ಡನಿಗೆ ದೊಣ್ಣೆ ಪೆಟ್ಟು ; ಜಾಣನಿಗೆ ಮಾತಿನ ಪೆಟ್ಟು
4) ಮನಸ್ಸಿದ್ದರೆ ಮಾರ್ಗ.

7. ಕೆಳಗೆ ಕೊಟ್ಟಿರುವ ಭಾಗವನ್ನು ಓದಿ ಅದರ ಅಡಿಯಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : **10**

ಹಿಂದೆ ವಿಜಯನಗರದಲ್ಲಿ ಒಬ್ಬ ರಾಜ ಇದ್ದ . ಅವನ ಹೆಸರು ಕೃಷ್ಣದೇವರಾಯ. ಅವನ ಆಸ್ಥಾನದಲ್ಲಿ ಒಬ್ಬ ವಿದೂಷಕ ಇದ್ದ . ಆ ವಿದೂಷಕನ ಹೆಸರು ತೆನಾಲಿರಾಮ. ತೆನಾಲಿರಾಮ ತುಂಬ ಬುದ್ಧಿವಂತ ಮತ್ತು ಹಾಸ್ಯಗಾರ. ಒಂದು ದಿನ ರಾಜನಿಗೆ ತೆನಾಲಿರಾಮನ ಮೇಲೆ ಬಹಳ ಕೋಪ ಬಂತು. ಅವನನ್ನು ಕರೆದು ''ಎಲವೋ ತೆನಾಲಿರಾಮ, ಇನ್ನು ಮೇಲೆ ನನಗೆ ನಿನ್ನ ಮುಖ ತೋರಿಸಬೇಡ ಹೋಗು'' ಎಂದು ಅಪ್ಪಣೆ ಮಾಡಿಬಿಟ್ಟ. ಸುಮಾರು ಒಂದು ವಾರ ಕಳೆಯಿತು. ತೆನಾಲಿರಾಮ ಬರಲಿಲ್ಲ. ರಾಜನಿಗೆ ಬಹಳ ಬೇಸರ ಬಂತು. ತೆನಾಲಿರಾಮನನ್ನು ಕರೆಸಬೇಕು ಎನ್ನಿಸಿತು. ಆದರೆ ಹಾಗೆ ಮಾಡಲು ಪ್ರತಿಷ್ಠೆ ಅಡ್ಡಬಂತು.

ಒಂದು ದಿನ ಬೆಳಗ್ಗೆ ತೆನಾಲಿರಾಮ ಒಂದು ಕಪ್ಪು ಮಡಿಕೆ ತೆಗೆದುಕೊಂಡು ಅದನ್ನು ತಲೆಗೆ ಕವಿಚಿಕೊಂಡ. ಸೀದಾ ಅರಮನೆಗೆ ಹೋಗಿ ರಾಜನ ಮಗು ಮಲಗಿದ್ದ ಕೊಠಡಿಯ ಮುಂದೆ ನಿಂತ. ಮಗು ಎದ್ದ ಕೂಡಲೆ ತೆನಾಲಿರಾಮನನ್ನು ನೋಡಿತು. ಮಡಕೆ ಮುಖದ ವಿಕಾರ ವ್ಯಕ್ತಿಯನ್ನು ಕಂಡು ಕಿಟಾರನೆ ಕೀರಿತು.

ರಾಜ ಅಲ್ಲಿಗೆ ಓಡಿ ಬಂದ. ಮಡಕೆ ಮುಖದವನು ಯಾರು ಎಂದು ತಿಳಿಯದೆ ''ನೀನು ಯಾರು ?'' ಎಂದು ಕೋಪದಿಂದ ಕೇಳಿದ. ತೆನಾಲಿರಾಮ ಕೈಜೋಡಿಸಿ, ''ಕ್ಷಮಿಸಬೇಕು ಪ್ರಭು, ನಾನು ತೆನಾಲಿರಾಮ '' ಎಂದ. ರಾಜನಿಗೆ ತುಂಬ ನಗು ಬಂತು. ''ಎಲೋ ರಾಮ, ಇದೇನು ವೇಷವೋ ? ಯಾರಾದರೂ ಮುಖಕ್ಕೆ ಮಡಕೆ ಕವಿಚಿಕೊಳ್ಳುತ್ತಾರೇನೊ ? ಯಾಕೆ ಹೀಗೆ ಬಂದಿದ್ದೀಯೆ '' ಎಂದ.

1) ತೆನಾಲಿರಾಮ ಯಾರು ? ಅವನು ಯಾರ ಆಸ್ಥಾನದಲ್ಲಿದ್ದ ?
2) ರಾಜನಿಗೆ ಕೋಪಬರಲು ಕಾರಣ ಏನು ? ಅವನು ರಾಮನಿಗೆ ಏನೆಂದು ಆಜ್ಞಾಪಿಸಿದನು ?
3) ರಾಜನಿಗೆ ಏಕೆ ಬೇಸರ ಆಯಿತು ?
4) ರಾಜನಿಗೆ ಸಿಟ್ಟುಹೋಗಲು ತೆನಾಲಿರಾಮ ಮಾಡಿದ ಉಪಾಯವೇನು ?
5) ರಾಜನಿಗೆ ಏಕೆ ನಗು ಬಂತು ? ಆ ಸಂದರ್ಭದಲ್ಲಿ ಅವನು ಏನು ಹೇಳಿದ ?

ಸರ್ಟಿಫಿಕೇಟ್ ಶಿಕ್ಷಣ ಪರೀಕ್ಷೆ, ಆಗಸ್ಟ್ 2009

ಪತ್ರಿಕೆ – 2 : ಕನ್ನಡ ವ್ಯಾಕರಣದ ಮೂಲಾಂಶಗಳು ಮತ್ತು ಭಾಷಾಂತರ

Certificate Course in Kannada for Non-Kannada Speakers Examination, August 2009

Paper – II : ELEMENTS OF KANNADA GRAMMAR AND TRANSLATION

ಕಾಲ : 3 ಗಂಟೆಗಳು | ಗರಿಷ್ಠಾಂಕ : 100

Time : 3 Hours | Max. Marks : 100

ಸೂಚನೆಗಳು : *1) 'ಬಿ' ವಿಭಾಗವನ್ನು* ***ಎಲ್ಲರೂ*** *ಉತ್ತರಿಸಬೇಕು.*

2) ***ಹಿಂದಿ*** *ಮತ್ತು* ***ಉರ್ದು*** *ಮಾಧ್ಯಮದ ವಿದ್ಯಾರ್ಥಿಗಳು* ***'ಎ'*** *ಮತ್ತು* ***'ಬಿ'*** *ವಿಭಾಗಗಳನ್ನು* ***ಪ್ರತ್ಯೇಕ*** *ಉತ್ತರ ಪತ್ರಿಕೆಗಳಲ್ಲಿ ಬರೆಯಬೇಕು.*

3) ***ಇಂಗ್ಲೀಷ್*** *ಮಾಧ್ಯಮದ ವಿದ್ಯಾರ್ಥಿಗಳು* ***'ಎ'*** *ಮತ್ತು* ***'ಬಿ'*** *ವಿಭಾಗಗಳನ್ನು* ***ಒಂದೇ*** *ಪತ್ರಿಕೆಯಲ್ಲಿ ಉತ್ತರಿಸಬೇಕು.*

ಭಾಗ - 'ಎ'

1. **ಕನ್ನಡಕ್ಕೆ** ಭಾಷಾಂತರಿಸಿ : **15**

हम लोग एक छोटे से घर में रहते हैं। यह एक सड़क के किनारे है। मेरे घर में तीन कमरे हैं। प्रत्येक कमरा साफ़ और सुंदर है। मेरे घर में एक रसोई घर है जो बड़ा है। माँ इसमें खाना बनाती है। प्रत्येक कमरे में एक पंखा है। मेरे कमरे में एक कुर्सी है। मैं कुर्सी पर बैठता हूँ। उसमें एक टेबल भी है। मैं टेबल पर किताब और नोट बुक रखता हूँ। मेरे घर के सामने एक बग़ीचा है। बग़ीचे में लाल और पीले फूल हैं। मैं अपने घर को बहुत पसंद करता हूँ। घर से अधिक सुंदर जगह कहाँ मिल सकती है ?

ಅಥವಾ

کنڑ میں ترجمہ کیجئے :

دیکھنے والے بہت سارے لوگ تھے۔ ہال نہ کافی تھا۔ میدان میں کرنے کے لئے کئی پردوں کی ضرورت تھی۔ ایسے کاموں کا سارا خرچ مدرسہ پر داشت کرے تو خرچ بڑھ جاتا ہے۔ لڑکوں نے خوشی خوشی چندہ اکھٹا کیا۔ کچھ مدد جامعہ تے بھی دی۔ عید کا زمانہ تھا۔ اس سے بہتر تاریخ اور کونسی ہو سکتی تھی ؟ کھلے میدان میں جامعہ کے تمام لوگ اور مہمان بیٹھے ہوئے تھے۔ ان سب کے بیچوں بیچ مولانا محمد علی بھی بیٹھ گئے۔ سب سے پہلے لڑکوں نے قومی ترانہ گایا پھر ایک بڑے طالب علم کے واقعات دکھائے گئے۔ کہ اس نے قومی جلسہ میں حصہ لیا۔

ಅಥವಾ/OR

We cannot gain anything without effort and hard work. Some people do not work hard, but waste their time in waiting for a miracle to happen. It is no use trusting to good luck. There is no such thing as luck or chance. It is by hard work, effort and enterprise that we can achieve success. A student can never become a scholar unless he takes pains over his studies. We should never forget that it is only the hard work and continuous effort which ultimately give us success.

2. **ಹಿಂದಿ, ಉರ್ದು** ಅಥವಾ **ಇಂಗ್ಲೀಷ್‌ಗೆ** ಭಾಷಾಂತರಿಸಿ : **15**

ಆಗಸ್ಟ್ ಹದಿನೈದರಂದು ಪ್ರತಿ ವರ್ಷ ಭಾರತದ ಸ್ವಾತಂತ್ರ್ಯ ದಿನಾಚರಣೆ ನಡೆಯುತ್ತದೆ. ಇದು ಒಂದು ಸಂಭ್ರಮದ ದಿನ. ನಾಡಿನ ಎಲ್ಲ ಕಡೆ ಹಬ್ಬದಂತೆ ಜನ ಈ ಸಮಾರಂಭದಲ್ಲಿ ಭಾಗವಹಿಸುತ್ತಾರೆ. ಶಾಲಾ ಕಾಲೇಜುಗಳು ಮತ್ತು ಕಚೇರಿಗಳಿಗೆ ಅಂದು ರಜೆ. ಊರಲ್ಲೆಲ್ಲ ಸಮಾರಂಭ ಆಚರಿಸಿ ಸಿಹಿ ಹಂಚುತ್ತಾರೆ. ಅಂದು ಎಲ್ಲ ಕಡೆ ಹಬ್ಬದ ವಾತಾವರಣ ಮೂಡಿರುತ್ತದೆ. ಆ ದಿನ ಎಲ್ಲೆಲ್ಲೂ ರಾಷ್ಟ್ರಧ್ವಜ ಹಾರಾಡುವುದನ್ನು ನೋಡುವುದೇ ಒಂದು ಸಂತಸದ ಅನುಭವ. ಬ್ರಿಟಿಷರ ಆಡಳಿತ ಭಾರತದಲ್ಲಿ ಕೊನೆಗೊಂಡ ದಿನ ಇದು. ನಾವು ಯಾವುದೇ ಪ್ರದೇಶಕ್ಕೆ ಸೇರಿರಲಿ, ಯಾವುದೇ ಜಾತಿಮತ ಜನಾಂಗಗಳಿಗೆ ಸೇರಿರಲಿ, ನಾವೆಲ್ಲ ಭಾರತೀಯರೆಂದು ಹೆಮ್ಮೆಪಡುವ ದಿನ ಇದು.

ಭಾಗ - 'ಬಿ'

3. ಈ ವಾಕ್ಯಗಳಲ್ಲಿರುವ **ತಪ್ಪುಗಳನ್ನು ತಿದ್ದಿ** ಬರೆಯಿರಿ : **(10×1=10)**

3.1) ಈ ಮರ ಎತ್ತರವಾಗಿದ್ದಾನೆ.

3.2) ಅವಳು ನನ್ನ ತಮ್ಮ.

3.3) ನನ್ನ ಜೇಬನ್ನು ನೂರು ರೂಪಾಯಿಗಳಿವೆ.

3.4) ಶಾಲೆಯಲ್ಲಿ ಮಕ್ಕಳು ಓದುತ್ತಾನೆ.

3.5) ಹಸಿವಾದಾಗ ಊಟ ಆಡಬೇಕು.

3.6) ಆಕಾಶವನ್ನು ಮೋಡಗಳು ಇವೆ.

3.7) ಅವನು ಚೆನ್ನಾಗಿ ಉತ್ತರ ಬರೆಯುತ್ತೀಯ.

3.8) ನವಿಲು ಕಾಡಿನಿಂದ ನರ್ತಿಸುತ್ತದೆ.

3.9) ನಾವು ಕೈಯನ್ನು ಊಟ ಮಾಡುತ್ತೇವೆ.

3.10) ಪೇಟೆಯನ್ನು ಹೋಗಿ ಪುಸ್ತಕ ತೊಗೊಂಡು ಬಾ.

4. **ಸೂಚನೆಗೆ ಅನುಗುಣವಾಗಿ** ವಾಕ್ಯಗಳನ್ನು ಬದಲಾಯಿಸಿ : **(10×1=10)**

4.1) ಅವನು ತುಂಬಾ ಒಳ್ಳೆಯ ಹುಡುಗ.

(ವಿರುದ್ಧ ಪದ (opposite))

4.2) ಹಸು ಹುಲ್ಲು ಮೇಯುತ್ತದೆ.

(ಬಹುವಚನ)

4.3) ಇಂದು ಶನಿವಾರ.

(ನಾಳೆ ಯಾವ ವಾರ ?)

4.4) ಹುಡುಗರು ಮೈದಾನದಲ್ಲಿ ಆಟ ಆಡುತ್ತಾರೆ.

(ಏಕವಚನ)

4.5) ಅವಳು ಇವತ್ತು ಬೆಂಗಳೂರಿಗೆ ಹೋಗಬೇಕು.

(ನಿಷೇಧಾರ್ಥಕ (negative))

4.6) ರಾಮನು ತಿಂಡಿ ತಿನ್ನುತ್ತಾನೆ.

(ಭೂತಕಾಲ)

4.7) ಆ ಹುಡುಗಿ ಪೇಟೆಗೆ ಹೋಗುತ್ತಾಳೆ.

(ಪುಲ್ಲಿಂಗ)

4.8) ಮತ್ತು ಹೂವುಗಳು ಮರದಲ್ಲಿ ಈ ಹಣ್ಣುಗಳು ಬಿಡುತ್ತವೆ ಒಳ್ಳೆಯ.

(ಸರಿಯಾಗಿ ಜೋಡಿಸಿ ಬರೆಯಿರಿ.)

4.9) ಗಾಳಿ ತಂಪಾಗಿ ಬೀಸುತ್ತಿದೆ.

(ಪ್ರಶ್ನಾರ್ಥಕ)

4.10) ನಾನು ಬಸ್ಸಿನಲ್ಲಿ ಬಂದೆ.

(ವರ್ತಮಾನ ಕಾಲ)

5. ಖಾಲಿ ಬಿಟ್ಟಿರುವ ಜಾಗಗಳನ್ನು **ಸೂಚಿಸಿರುವಂತೆ** ಭರ್ತಿ ಮಾಡಿ : **(10×1=10)**

5.1) ನಾನು ಪ್ರತಿ ದಿನ ಬೆಳಗ್ಗೆ ಐದು ಗಂಟೆಗೆ _____
(ಏಳು)

5.2) ಈ ಪುಸ್ತಕ _____ ಹಿಂದಿರುಗಿಸು.
(ಓದು)

5.3) ಕನ್ನಡ _____ ಮಾತನಾಡಲು ಅಭ್ಯಾಸ ಮಾಡಿ.
(ಅಲ್ಲಿ)

5.4) ಹಣ ಸಂಪಾದಿಸಲು ಕೆಲಸ _____
(ಮಾಡು, should ಎಂಬ ಅರ್ಥದಲ್ಲಿ)

5.5) ನೀವು ನಮ್ಮ ಮನೆಗೆ _____
(ಬಾ)

5.6) ನೀನು ನಾಳೆ ಮೈಸೂರಿಗೆ _____
(ಹೋಗು)

5.7) ಬ್ಯಾಗಿನಲ್ಲಿ _____ ಪುಸ್ತಕಗಳು ಇವೆ ?
(ಏನು, ಯಾವಾಗ, ಎಷ್ಟು - ಸರಿಯಾದ ರೂಪ ಬಳಸಿ.)

5.8) ಮನೆಯಲ್ಲಿ ಇವತ್ತು ಅಡುಗೆ _____
(ಮಾಡು, ನಿಷೇಧಾರ್ಥಕದಲ್ಲಿ(negative))

5.9) ಮಕ್ಕಳು ಪಾಠಗಳನ್ನು _____
(ಕಲಿ)

5.10) ನಮ್ಮ ಮನೆಯಲ್ಲಿ ನಾಲ್ಕು ಜನರಿದ್ದಾರೆ.
(ಪ್ರಶ್ನಾರ್ಥಕವಾಗಿ ಬದಲಾಯಿಸಿ.)

6. **ಸೂಚನೆಗೆ ಅನುಗುಣವಾಗಿ** ಯಾವುದಾದರೂ **ಮೂರು** ಧಾತುಗಳನ್ನು ವಿವಿಧ ಪುರುಷ, ವಚನ ಮತ್ತು ಲಿಂಗಗಳಲ್ಲಿ ನಡೆಸಿ : **(3×5=15)**

6.1) ಹೋಗು.

(ವರ್ತಮಾನ ಕಾಲ)

6.2) ಹಾಡು.

(ಭೂತ ಕಾಲ)

6.3) ಮಾಡು.

(ತಾತ್ಕಾಲಿಕ ವರ್ತಮಾನಕಾಲ)

6.4) ಏಳು.

(ಭವಿಷ್ಯತ್ ಕಾಲ)

7. ಯಾವುದಾದರೂ **ಮೂರಕ್ಕೆ** ವಿಭಕ್ತಿ ಪ್ರತ್ಯಯಗಳನ್ನು ಸೂಚಿಸಿ : **(3×5=15)**

7.1) ಮರ.

7.2) ನದಿ.

7.3) ಹುಡುಗ.

7.4) ಹೂವು.

7.5) ರಾಣಿ.

8. ಬಿಡಿಸಿ ಬರೆಯಿರಿ : **(5×1=5)**

8.1) ಪುಸ್ತಕದಿಂದ.

8.2) ಮಹೋತ್ಸವ.

8.3) ಗಿಡಮರ.

8.4) ಮನೆಯಲ್ಲಿ.

8.5) ದೂರದರ್ಶನ.

9. ಸೇರಿಸಿ ಬರೆಯಿರಿ : **(5×1=5)**

9.1) ಕಣ್ಣು + ಇಂದ.

9.2) ಮಳೆ + ಕಾಲ.

9.3) ಆಕಾಶ + ಅಲ್ಲಿ.

9.4) ಕೆಂಪು + ಮಣ್ಣು.

9.5) ಮಂತ್ರಿ + ಮಂಡಲ.